
ಬದುಕು ಇವುಗಳ ಸಂಘರ್ಷಗಳ ದಾರಿಗಳನ್ನು ಕಲಾರೂಪದಲ್ಲಿ ಅರಿತರೆ ಒಳಿತು. ಪಾತ್ರವೊಂದರ ಸ್ವಗತ ಕ್ರಮ ಮತ್ತು ನಿರೂಪಣೆಯ ಕಥನ ಕ್ರಮಗಳು ತಲುಪುವ ನಿಲ್ದಾಣವೊಂದೇ. ಆದರೆ, ತಾವು ಆರಿಸಿಕೊಂಡಿರುವ 'ವಸ್ತು'ವಿಗೆ ಇವು ತಾಕುವ ಬಗೆ ಹೇಗೆಂಬುದನ್ನು ತಿಳಿಯಬೇಕು. ಗಿಣಿವಾರ ವಿನೋದವನ್ನು ಎಲ್ಲಿ, ಹೇಗೆ ತರಬೇಕೆಂಬುದರ ಕುರಿತು ಎಚ್ಚರವಹಿಸಬೇಕು. ಇಲ್ಲದಿದ್ದರೆ ಹಾಸ್ಯ ಪ್ರಬಂಧಕ್ಕೂ, ಕಥೆಗೂ ವ್ಯತ್ಯಾಸವೇ ಇಲ್ಲದಂತಾಗುತ್ತದೆ. 'ಹಸಿಬೆ' ಮತ್ತು 'ಬಾಂಗ್ಲಾದ ಹಕ್ಕಿಗಳು' ಕಥೆಗಳು ಇವರನ್ನು ಕೊಂಚ ಮುನ್ನಡೆಸಿವೆ. ಸಮಾಜವನ್ನು ತಲ್ಲಣಗೊಳಿಸಿರುವ ಕ್ರಮ; ಮುಗ್ಧಲೋಕವೊಂದರ ನಾಶ ಇವುಗಳಲ್ಲಿ ಕಾಣಬಹುದು. ಮುದಿರಾಜ್ ಮನುಷ್ಯ ಸಂಬಂಧಗಳಿಗೆ ಒತ್ತುಕೊಡುವ ಕಥೆಗಾರ. ಮನುಷ್ಯನಲ್ಲಿ ಇರಬಹುದಾದ ಹಲವು ಭಾವನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲರು. 'ಆಸರೆ' ಎಂಬ ಕಥೆಯೇ ಇದಕ್ಕೆ ನಿದರ್ಶನ. ಕಥೆಯ ಆರಂಭವನ್ನು ಮುದಿರಾಜ್ ಯಾವುದೇ ಸಿಕ್ಕುಗಳಿಲ್ಲದೇ ಸಾಗಿಸುತ್ತಾರೆ. ಮನುಷ್ಯಪ್ರೇಮ ಇವರ ಕಥೆಗಳ ಮುಖ್ಯ ವಸ್ತು. ಭಾಷೆಯನ್ನು ಬಳಸುವ ಕ್ರಮದಲ್ಲಿ ಉಳಿದವರಿಗಿಂತ ಕೊಂಚ ಮುಂದಿದ್ದಾರೆ. ಪ್ರಾದೇಶಿಕತೆ ಅನ್ನೋದು ನಿರೂಪಣಾ ದಾರಿಯಲ್ಲೇ ಕಾಣಿಸುತ್ತದೆ. ಆದರೆ, ಇವರಿಗೂ ಕೂಡ ಕಥೆಯ ಅಂತ್ಯದ ಬಗ್ಗೆ ಮತ್ತು ಪಾತ್ರಗಳನ್ನು ಹಿಗ್ಗಿಸುವ ಕುರಿತು ಸಮಸ್ಯೆಗಳಿವೆ. ಶರಣ ಬಸವ, ಕೋರಿ ಇಬ್ಬರೂ ಬದಲುಗೊಂಡ ಗ್ರಾಮೀಣ ಪರಿಸರಗಳನ್ನು ಚಿತ್ರಿಸುತ್ತಾರೆ. ಮುಸ್ಲಿಂ ಜಗತ್ತನ್ನು ತೀರಾ ಅನುಕಂಪದ ಹಾದಿಯಲ್ಲಿ ನೋಡದೇ, ಸತ್ಯಗಳ ಕನ್ನಡಿಯಲ್ಲಿ ಗ್ರಹಿಸುತ್ತಾರೆ. ಅಕ್ಷರವಂತ ಹೊಸತಲೆಮಾರು ಸಾಮರಸ್ಯವನ್ನು ಜೋಡಿಸುವ ಚಿತ್ರಗಳಿದ್ದರೂ, ತಟ್ಟನೆ ಇದನ್ನು ಛಿದ್ರಗೊಳಿಸುವ ಶಕ್ತಿಗಳು ಜಾಗಪಡೆಯುತ್ತವೆ. ಶರಣಬಸವ ಅವರ 'ಖಂಡದ ಸಾರು' ಕಥೆ ತನ್ನ ಇತಿಮಿತಿಯಲ್ಲಿ ಮುಸ್ಲಿಂ ಹೆಣ್ಣಿನ ಮೂಲಕ ಬದುಕಿನ ತತ್ವವಷ್ಟೇ ಮುಖ್ಯವೆಂದು ನಿರೂಪಿಸುತ್ತದೆ. ಇವರ ಕಾಳಜಿಗಳು ಸೌಹಾರ್ದ ಬದುಕಿನ ಹೊಸ ರೂಪಗಳೇ ಆಗಿವೆ. ಹಲವು ಬಾರಿ ಇವರಲ್ಲಿ ಕಥಾವಸ್ತು ಪುನರಾವರ್ತಿತವಾಗುತ್ತದೆ. ಸಂವೇದನೆಗಳನ್ನು ಗಂಭೀರವಾಗಿಸಿಕೊಂಡು ಬರೆಯುವ ಹಂತದಲ್ಲಿ ಕೋರಿ ಇದ್ದಾರೆ. 'ಗುಂಗು', 'ಪಟ್ಟಾ', 'ಮಲ್ಲಯ್ಯನ ಮೈಕು' ಇತ್ಯಾದಿ ಕಥೆಗಳಲ್ಲಿ ಮತ್ತಷ್ಟು ಹೊಗೆಯಾಡುತ್ತಿರುವ ಕೋಮು ಸಂಬಂಧಿ ಆಶಯಗಳನ್ನು ಅಭಿವ್ಯಕ್ತಿಸುತ್ತಾರೆ. ವರ್ತಮಾನವೇ ಇಲ್ಲಿ ಮುಖ್ಯ. ಕಾಮ ಬಹುತೇಕ ಕಥೆಗಳಲ್ಲಿ ವಸ್ತುವಾಗಿ ಕಾಣಿಸಿಕೊಂಡರೂ ಅದಕ್ಕೆ ಗಟ್ಟಿಯಾದ ತಳಹದಿ ಇಲ್ಲದೇ ಹೋಗುತ್ತದೆ. ಕೋರಿ ತರದವರಿಗೆ ಪ್ರೀತಿ ಸಮಾಜದ ಪರಿವರ್ತನೆಗಳಿಗೆ ಕಾರಣವಾಗುವ ವಸ್ತುವಾಗಿದೆ. ಆದರೆ, ಈ ಬಗೆಯ ಕಾಳಜಿಗಳನ್ನು ಕಥೆಯಾಗಿಸುವಾಗ ವೈಚಾರಿಕತೆ ಗಟ್ಟಿಯಾಗಬೇಕೇ ಹೊರತು ಗಾಸಿಪ್ ಆಗಬಾರದು. ಕಪಿಲ ಹುಮನಾಬಾದ ಅವರು ನಿರೂಪಣೆಯಲ್ಲಿ ಅಡಗಿರುವ ಕಾವ್ಯಾತ್ಮಕ ಶೈಲಿಯನ್ನು ವಸ್ತುವಿನ ಗಂಭೀರತೆಗೆ ತಕ್ಕ ಹಾಗೆ ಬಳಸಿಕೊಳ್ಳುವುದಿಲ್ಲ. 'ಒಳಕಲ್ಲು' ಕಥೆಗೆ ಬದುಕಿನ ವಿಶಿಷ್ಟತೆ ಪ್ರಾಪ್ತವಾದರೂ ಮತ್ತೆ ಹಳೆಯ ಜಾಡಿಗೆ ಮರುಳುತ್ತಾರೆ. ಹೊಸ ಬಗೆಯ ಜೀವನ ಕ್ರಮವನ್ನು ಇವರ ಪಾತ್ರಗಳು ಮತ್ತಷ್ಟು ಮಾಗುವಿಕೆ ಹಂತಕ್ಕೇರಿದರೆ ಪಲ್ಲಟವನ್ನು ಕಾಣಬಹುದು. ಈ ಭಾಗದ ಕಥೆಗಾರರಿಗೆ ಹಿಂದಿನ ತಲೆಮಾರುಗಳು ನಿರ್ವಹಣೆ ಮಾಡಿದ ವಸ್ತುಗಾರಿಕೆಗಿಂತ ನಾವೇನು ಮಾಡಬಹುದು ಎಂಬುದರ ಕಡೆಗೆ ಯೋಚಿಸಬೇಕಾದ ಅನಿವಾರ್ಯತೆ ಇದೆ.




ಕೋಮು ಮತ್ತು ಜಾತಿಗಳು ಪಡೆಯುತ್ತಿರುವ ಸಂಘರ್ಷದ ಮರುರೂಪಗಳನ್ನ ಅಭಿವ್ಯಕ್ತಿಸುವ ಇರಾದೆ ಇದ್ದರೂ, ಅದಕ್ಕೊಂದು ಬದುಕಿನ ತತ್ವದ ತಳಹದಿ ಅಗತ್ಯ. ರಾಜಕಾರಣ ತರುತ್ತಿರುವ ತಲ್ಲಣಗಳು ಹಳ್ಳಿಯ ಪ್ರಜ್ಞೆಯನ್ನು ದಂಗುಬಡಿಸಿವೆ. ಇದರ ಮೂಲಗಳನ್ನು ಗ್ರಾಮಮೂಲದವರೇ ಹಿಡಿಯಬೇಕು; ಅದರಲ್ಲಿ ಭಿನ್ನತೆಯೂ ಕಾಣಿಸಬೇಕು. ಹಿಂದಿನ ಜಮೀನ್ದಾರಿ ನೋಟಗಳನ್ನು ಕಣ್ಣಾರೆ ಕಂಡ ಈ ತಲೆಮಾರು ಅದನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ; ಇಲ್ಲವೇ ಇದಕ್ಕೆ ಸೆಡ್ಡು ಹೊಡೆದು ನಿಲ್ಲುವ ಅಕ್ಷರವಂತ ಹುಡುಗರು ವೈಯಕ್ತಿಕ ಬಿರುಕುಗಳಿಂದ ಬದುಕಿನಲ್ಲಿ ಸೋಲುತ್ತಾರೆ. ಸತ್ಯಣ್ಣನ ಹೊಸ ಕಥೆ 'ಒಂದು ತೇಗದ ಕುರ್ಚಿ' ನೋಡಿದರೇ ತಿಳಿದೀತು. ಈ ಭಾಗದಿಂದ ಬರುತ್ತಿರುವ ಅನೇಕ